ಕವಿತೆ



ನಿರ್ಮಲಾ ಶೆಟ್ಟರ್

ಕಲೆ: ಮುರಳೀಧರ್ ರಾಥೋಡ್



# ಪುಟ್ಟ ಪಾದವೀಗ ಪುರುಷಪಾದ

ಪುಟ್ಟ ಪಾದ ಎದೆಗೆ ಒದ್ದಷ್ಟು ಹೃದಯಕೆ ಹಿಗ್ಗು
ಕಣ್ಣ ಕಾಡಿಗೆ ಹೊಕ್ಕಂತೆ ಗಂಧವ ಅರಸುತಲಿ
ಕೊಳದಂಚನು ದಾಟಬಾರದು ನೀರೆಂಬಂತೆ
ಹೂ ಪಕಳೆ ಪಾದ ಮಣ್ಣಾದೀತು ನೋವಾದೀತು

ಕೂಸು ಕಂದಮ್ಮ ಮೊಟ್ಟ ಮೊದಲ ಹರವದು
ಹೊರಳಿಸಿದ ಮುಖ ಚಂದ್ರಕಾಂತಿ ಹೂ ನೆನಪು
ನಕ್ಷತ್ರ ನೋಟಕೆ ತೊದಲು ಮಾತಲ್ಲಿದೆ ಬೆಲ್ಲ
ಮಾಫಿ ಮಾಡದೆ ಬೇರೆ ಮಾತುಗಳೇ ಇಲ್ಲ

ಉಬ್ಬಿಸಿದ ಗಲ್ಲದಿಳಿಜಾರು ಹನಿಯುದುರಿ
ತುಂತುರುದುರಿಸಿ ಮೋಡ ಬೆಟ್ಟ ಧರೆಯು
ಕಣ್ಣೆದುರು ಚಂದ್ರನ ತುಣುಕೊಂದು ತೂಗಿ
ಅಪ್ಪಿದೆ ಹಿಡಿದೊತ್ತಿದ ಮುತ್ತಿಗೆ ಒಲವು ಬಾಗಿ

ಬಾಚಣಿಕೆ ಸೋಲುತದೆ ಕೂದಲಿನ ಹಿಡಿತಕೆ
ಕಪ್ಪಾಕಾಶವನು ಒಟ್ಟಾಗಿಸದೆ ನೊಂದೆದೆಯಲ್ಲಿ
ತಾರೆಯನು ಪೋಣಿಸುತ ಕಾವಳವು ಕುಣಿದಿದೆ
ಹೆಜ್ಜೆ ತಪ್ಪದೆ ತಿರು ತಿರುಗಿ ಹೂವ ಮುಡಿದು

ಕಚಗುಳಿಯ ಪ್ರೀತಿಯಲಿ ಕಚ್ಚಿದ ನೋವೊಂದು
ತಾಯಿದೆಯು ಮರೆತರೂ ನೆನಪಿಸಿವೆ ಕಲೆಗಳು
ನೋವ ಲೆಕ್ಕವೇ ಇಲ್ಲ ಕರುಳಕುಡಿಯಲ್ಲವೇ
ಬೆಂಕಿಯಲ್ಲಷ್ಟೇ ಬೇಯುವುದಿಲ್ಲ ತಾಯ ಬದುಕು

ಪುರುಷ ಪಾದವಾಯಿತು ಪುಟ್ಟಪಾದವೀಗ
ಸವಕಲು ನಾಣ್ಯವೀಗ ಹೆತ್ತವ್ವನ ಮಾತು
ನಿನ್ನೆದುರು ನಿನ್ನವ್ವ ಏನಲ್ಲ ಬಿಡು ಮಗನೆ
ನೆನಪಿರಲಿ ಜನುಮವಿಡಿ ದಾಟಿದ್ದು ಸಪ್ತಲೋಕ

ತಲೆಮಾರು ಸರಿದು ಹೊಸದೊಂದು ಋತುಮಾನ
ಹೇಳು ಹೀಗೆಯೇ ಸಾಗಿ ಮುಗಿಯಬಹುದೇನು
ಬದಲಾಯಿತು ಜಗವು ಪಟ್ಟದರಸುತನ ಕೂಡ
ಜಗದ ನಿಯಮವ ಯಾರು ಬದಲಿಸುವರೇನು